
ನರೇಂದ್ರ ತನ್ನ ಗೆಳೆಯರೊಡನೆ ಸೇರಿ ಹುಡುಗಾಟ ವಾಡುತ್ತ, ಆನಂದದಿಂದ ಕಾಲ ಕಳೆಯುತ್ತಿದ್ದ. ಆದರೆ ಯಾವುದರಲ್ಲಿಯೂ ರೀತಿನೀತಿಗಳನ್ನೂ ಮೀರುತ್ತಿರಲಿಲ್ಲ.
ಬನ್ನಿ, ಈಗ ನಾವೆಲ್ಲ ಧ್ಯಾನಕ್ಕೆ ಕುಳಿತುಕೊಳ್ಳೋಣ.
ನರೇಂದ್ರ ಮತ್ತು ಅವನ ಗೆಳೆಯರು ದೇವರ ಕೋಣೆಯಲ್ಲಿ ಬಾಗಿಲನ್ನು ಹಾಕಿ ಕಣ್ಣುಮುಚ್ಚಿಕೊಂಡು ಧ್ಯಾನಕ್ಕೆ ಕುಳಿತರು.
ಈಗ ದೇವರನ್ನು ಧ್ಯಾನಿಸೋಣ.
ಅವರೆಲ್ಲ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದಂತೆಯೇ ಕೋಣೆಯೊಳಗೆ ಒಂದು ನಾಗರಹಾವು ಇರುವುದನ್ನು ಕಂಡರು. ಕೂಡಲೇ ಕೂಗಿಕೊಳ್ಳುತ್ತ ಆಚೆಗೆ ಓಡಿದರು.
ನರೇಂದ್ರ, ನರೇಂದ್ರ, ಏಳು ಏಳು ! ನಾಗರಹಾವು ನಿನ್ನ ಕಡೆಯೇ ಹರಿದುಬರುತ್ತಿದೆ.
ಆದರೆ ನರೇಂದ್ರ ಗಾಢವಾದ ಧ್ಯಾನದಲ್ಲಿ ಮುಳುಗಿ ಮೈಮರೆತಿದ್ದ. ಹಾವು ಬಂದದ್ದಾಗಲಿ, ಗೆಳೆಯರು ಕೂಗಿಕೊಂಡಿದ್ದಾಗಲಿ ಅವನಿಗೆ ಕೇಳಿಸಲೇ ಇಲ್ಲ. ಹಾವು ಅವನಿಗೆ ಯಾವ ತೊಂದರೆಯನ್ನೂ ಕೊಡದೆ ದೂರ ಸರಿದುಹೋಯಿತು.